ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ರೇಷ್ಮೆ ಮಾರುಕಟ್ಟೆಗಳಲ್ಲಿ ಕಾನೂನು ಬಾಹಿರ ಹರಾಜು

2091 (2508) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 11-10-99ರ ನಂತರ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸರ್ಕಾರಿ ಸಿಲ್ಕ್ ಫ್ಯಾಕ್ಟರಿಗಳಾದ ಮುಡಿಗುಂಡಂ, ಕೊಳ್ಳೇಗಾಲ ಮತ್ತು ಸಂತೇಮರಳ್ಳಿಯ ಸಿಲ್ಕ್ ಫಿಲೇಚರ್‌ಗಳಲ್ಲಿ ಬಂದಿರುವ ಲಾಭ ಅಥವಾ ನಷ್ಟ ಎಷ್ಟು;

ಆ) ಯಾವ ಯಾವ ಬಾಬ್ತುಗಳಲ್ಲಿ ಎಷ್ಟು ನಷ್ಟವಾಗಿದೆ; ನಷ್ಟಕ್ಕೆ ಕಾರಣಗಳೇನು;

ಇ) ಟಿ. ನರಸೀಪುರ, ಸಂತೇಮರಹಳ್ಳಿ ಮತ್ತು ಕೊಳ್ಳೇಗಾಲ ರೇಷ್ಮೆ ಮಾರುಕಟ್ಟೆಗಳಲ್ಲಿ ಕಾನೂನು ಬಾಹಿರ ಹರಾಜು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಇದನ್ನು ತಪ್ಪಿಸಲು ಕೈಗೊಂಡಿರುವ ಕ್ರಮವೇನು;

ಈ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಸಿಲ್ಕ್ ಫಿಲೇಚರ್‌ಗಳಲ್ಲಿ ಯಾವ ಯಾವ ಅಧಿಕಾರಿಗಳು ಯಾವ ಯಾವ ಅವಧಿಯಿಂದ ಕೆಲಸ ಮಾಡುತ್ತಿದ್ದಾರೆ;

ಉ) ಇವರಲ್ಲಿ ಯಾರ ವಿರುದ್ಧ ಎಷ್ಟು ದೂರುಗಳಿವೆ; ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಎಲ್ಲಾ ರೇಷ್ಮೆ ಕಾರ್ಖಾನೆಗಳು ನಷ್ಟದಲ್ಲಿ ನಡೆಯುತ್ತಿವೆ. 1999-2000 ರಿಂದ 2001-02ನೇ ಸಾಲಿನ ನಷ್ಟದ ವಿವರ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ರೇಷ್ಮೆ ಕಾರ್ಖಾನೆ	1999-2000	2000-01	2001-02
1.	ಮುಡಿಗುಂಡಂ	76.87	33.65	45.31
2.	ಕೊಳ್ಳೇಗಾಲ	88.56	146.70	130.15
3.	ಸಂತೇಮರನಹಳ್ಳಿ	118.28	126.55	106.09

ದಿನಾಂಕವಾರು ನಷ್ಟದ ವಿವರಗಳನ್ನು ತಯಾರಿಸಲಾಗುತ್ತಿಲ್ಲ. ಆದಕಾರಣ ವರ್ಷವಾರು ನಷ್ಟದ ವಿವರ ನಮೂದಿಸಿದೆ.

ಆ) ಬಾಬ್ತುವಾರು ನಷ್ಟದ ವಿವರಗಳನ್ನು ತಯಾರಿಸಲಾಗುತ್ತಿಲ್ಲ. ಒಟ್ಟು ವೆಚ್ಚ ಮತ್ತು ಆದಾಯಗಳ ಆಧಾರದ ಮೇಲೆ ನಷ್ಟದ ಪ್ರಮಾಣ ತಿಳಿಯುತ್ತದೆ. ನಷ್ಟಕ್ಕೆ ಕಾರಣಗಳೆಂದರೆ:

1. ಉತ್ಪಾದನಾ ಕಾರ್ಮಿಕರು ನಿವೃತ್ತಿ ಹೊಂದಿದ ಜಾಗಕ್ಕೆ ಹೊಸದಾಗಿ ಕಾರ್ಮಿಕರ ನೇಮಕಾತಿ ಆಗಿರದೆ ಉತ್ಪಾದನೆ ಕಡಿಮೆಯಾಗಿರುವುದು.
2. ಸರ್ಕಾರಿ ರೇಷ್ಮೆ ಕಾರ್ಖಾನೆಗಳ ಕಾರ್ಮಿಕರಿಗೆ : ನೌಕರರಿಗೆ ಕಾಲಕಾಲಕ್ಕೆ ನೀಡುತ್ತಿರುವ ವೇತನ ಶ್ರೇಣಿ ಹಾಗೂ ಇತರೇ ಭತ್ಯೆಗಳನ್ನು ಟ್ರೂಸ್ ಒಪ್ಪಂದದಡಿ ವಿಸ್ತರಿಸಿಕೊಂಡು ಬಂದಿರುವುದು. ಮಹಿಳೆಯರಿಗೆ ಹೆರಿಗೆ ರಜಾ ಸೌಲಭ್ಯ ಮತ್ತು ಕಾರ್ಮಿಕರಿಗೆ ಇನ್ನಿತರೆ ಸಾಮಾನ್ಯ ರಜೆಗಳು, ಇ.ಎಸ್.ಐ. ಸೌಲಭ್ಯ, ಪಿ.ಎಫ್. ಸೌಲಭ್ಯ, ಲೇ ಆಫ್ ಘೋಷಣೆಯಾದರೆ ಅರ್ಧ ಸಂಬಳ ಪಾವತಿ ಇತ್ಯಾದಿಗಳು ಮತ್ತು ಗ್ರಾಚ್ಯುಟಿ ಪಾವತಿ, ಸ್ವಯಂ ನಿವೃತ್ತಿ ಸೌಲಭ್ಯ ವಿಸ್ತರಣೆ

3. ರೇಷ್ಮೆ ಮಾರಾಟದ ಧಾರಣೆಯು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಿರುವುದು.
4. ಸರ್ಕಾರಿ ಬಂಡವಾಳದ ಮೇಲೆ ಶೇಕಡ 7ರಂತೆ ವಾರ್ಷಿಕ ಬಡ್ಡಿ ಹೇರಿರುವುದು.
5. ಸ್ಥಾಪನೆಯಾದಾಗಿನ ಹಳೆಯ ಯಂತ್ರೋಪಕರಣಗಳ ಬಳಕೆ ಹಾಗೂ ಪೂರ್ಣ ಸಾಮರ್ಥ್ಯದ ಯಂತ್ರೋಪಕರಣಗಳ ಬಳಕೆ ಇಲ್ಲದಿರುವುದು.
6. ಖಾಸಗಿ ರೀಲರುಗಳು ಮುಷ್ಕರ ಹೂಡಿದ್ದ ಸಂದರ್ಭಗಳಲ್ಲಿ ನೂಲು ಬಿಚ್ಚಾಣಿಕೆಗೆ ಸಾಮರ್ಥ್ಯ ಇಲ್ಲದಿದ್ದರೂ ರೇಷ್ಮೆ ಬೆಳೆಗಾರರಿಗೆ ಸಹಕರಿಸಲು ಗೂಡನ್ನು ಖರೀದಿಸಿರುವುದು.
7. ದ್ವಿತಳಿ ಬಿತ್ತನೆ ಪ್ರದೇಶದ ಬೆಳೆಗಾರರನ್ನು ಪ್ರೋತ್ಸಾಹಿಸಲು ಬಿತ್ತನೆ ಗೂಡುಗಳು ನೂಲು ಬಿಚ್ಚಾಣಿಕೆಗೆ ಸಾಮಾನ್ಯವಾಗಿ ಯೋಗ್ಯವಲ್ಲದಿದ್ದರೂ ಬಿತ್ತನೆ ದರ ಪಾವತಿಸಿ ಬಿತ್ತನೆಗೆ ಯೋಗ್ಯವಿದ್ದು ಬೇಡಿಕೆ ಇಲ್ಲದ ಸಂದರ್ಭಗಳಲ್ಲಿ ಬಿತ್ತನೆ ಗೂಡು ಖರೀದಿಸುವುದು.

ಇ) ಈ ಮಾರುಕಟ್ಟೆಗಳಲ್ಲಿ ಕಾನೂನು ಪ್ರಕಾರವೇ ಬಹಿರಂಗ ಹರಾಜು ನಡೆಯುತ್ತಿದೆ.

ಈ) ಚಾಮರಾಜನಗರ ಜಿಲ್ಲೆಯಲ್ಲಿರುವ ಇಲಾಖೆಯ ಸ್ವಾಮ್ಯದಲ್ಲಿರುವ ಸಿಲ್ಕ್ ಫಿಲೇಚರ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ವಿವರ ಕೆಳಕಂಡಂತಿದೆ. (ಮೈಸೂರು ಜಿಲ್ಲೆಯಲ್ಲಿ ಇಲಾಖೆಯ ಫಿಲೇಚರ್‌ಗಳಿಲ್ಲ).

1. ಶ್ರೀ ಎಲ್.ಕೆ. ಕಿಕ್ಕೇರಿಗೌಡ ರೇಷ್ಮೆ ಸಹಾಯಕ ನಿರ್ದೇಶಕರು, ಸರ್ಕಾರಿ ರೇಷ್ಮೆ ಕಾರ್ಖಾನೆ ಮಾಂಬಳ್ಳಿಯ ಪ್ರಧಾನ ವ್ಯವಸ್ಥಾಪಕರಾಗಿ ದಿನಾಂಕ 12-03-2003 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

2. ಶ್ರೀ ಐ.ಎಂ. ವಾಲಿ, ಸರ್ಕಾರಿ ರೇಷ್ಮೆ ಕಾರ್ಖಾನೆ ಚಾಮರಾಜನಗರದ, ಪ್ರಧಾನ ವ್ಯವಸ್ಥಾಪಕರಾಗಿ ದಿನಾಂಕ 14-5-2001 ರಿಂದ ಕಾರ್ಯನಿರ್ವಹಿಸುತ್ತಿದ್ದರು. ಸರ್ಕಾರಿ ರೇಷ್ಮೆ ಕಾರ್ಖಾನೆ ಚಾಮರಾಜನಗರದ ಪ್ರಧಾನ ವ್ಯವಸ್ಥಾಪಕರ ಹುದ್ದೆಯನ್ನು ಬೆಂಗಳೂರಿನ ರೇಷ್ಮೆ ಉದ್ಯಮ ಕೋಶದ ರೇಷ್ಮೆ ಮಾರಾಟ ಮಳಿಗೆಗೆ ಸ್ಥಳಾಂತರಿಸಲಾಗಿದೆ. ಈ ಹುದ್ದೆಯಲ್ಲಿ ಶ್ರೀ ಐ.ಎಂ. ವಾಲಿ, ಪ್ರಧಾನ ವ್ಯವಸ್ಥಾಪಕರು ದಿನಾಂಕ 28-6-2001 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀ ಎಸ್. ಸುಬ್ಬಯ್ಯ ಕಾರ್ಖಾನೆ ವ್ಯವಸ್ಥಾಪಕರವರನ್ನು ಡ್ರಾಯಿಂಗ್ ಅಧಿಕಾರಿಯಾಗಿ ದಿನಾಂಕ 3-12-2001 ರಿಂದ ಕಾರ್ಯನಿರ್ವಹಿಸಲು ವ್ಯವಸ್ಥೆ ಮಾಡಲಾಗಿದೆ.

3. ಶ್ರೀ ರಂಗಯ್ಯ, ಸರ್ಕಾರಿ ರೇಷ್ಮೆ ಕಾರ್ಖಾನೆ, ಕೊಳ್ಳೇಗಾಲದ ಪ್ರಧಾನ ವ್ಯವಸ್ಥಾಪಕರಾಗಿ ದಿನಾಂಕ 31-5-2001 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿಯವರು ಸರ್ಕಾರಿ ರೇಷ್ಮೆ ಹುರಿ ಮತ್ತು ನೇಯ್ಗೆ ಕಾರ್ಖಾನೆ, ಮುಡಿಗುಂಡಂನ ಪ್ರಧಾನ ವ್ಯವಸ್ಥಾಪಕರ ಹೆಚ್ಚುವರಿ ಪ್ರಭಾರವನ್ನು ದಿನಾಂಕ 12-1-2001 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

4. ಶ್ರೀ ಎ. ನರಸಿಂಹಪ್ಪ, ಸಹಾಯಕ ಕಾರ್ಖಾನೆ ವ್ಯವಸ್ಥಾಪಕರು, ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿಯ ಪ್ರಭಾರಿ ಪ್ರಧಾನ ವ್ಯವಸ್ಥಾಪಕರಾಗಿ ದಿನಾಂಕ 31-5-2001 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಉ) ಯಾರ ವಿರುದ್ಧವೂ ದೂರುಗಳಿಲ್ಲ.